# ತರಕಾರಿ ಮಾರುವುದಕ್ಕಿಂತ ಬೀಜ ಮಾರಾಟವೇ ಲೇಸು!



ಬೆಳೆದ ತರಕಾರಿ ಕೊಯ್ದರೆ 4–5 ದಿನಗಳಲ್ಲಿ ಮಾರಾಟವಾಗಬೇಕು. ಆದರೆ ತರಕಾರಿ ಬೀಜ ಹಾಗಲ್ಲವಲ್ಲ? 'ಅದಕ್ಕಿಂತ ಇದರಲ್ಲೇ ಹೆಚ್ಚು ಲಾಭ' ಎನ್ನುತ್ತಾರೆ ಬಿಲ್ಲಂಪದವಿನ ಈ ಯಶಸ್ವೀ ಕೃಷಿಕ.

ಚಿತ್ರ– ಲೇಖನ: **ಗಣಪತಿ ಹಾಸ್ಪುರ**

ಬೀಜಕ್ಕಾಗಿಯೇ ತರಕಾರಿಗಳನ್ನು ಬೆಳೆಯುವ ಕೃಷಿಕರ ಬಗ್ಗೆ ಎಲ್ಲಿಯಾದರೂ ಕೇಳಿದ್ದೀರಾ? ಅಂತಹ ಅಪರೂಪದ ಕೃಷಿಕರ ಪೈಕಿ ಇಲ್ಲೊಬ್ಬ ಬಿಲ್ಲಂಪದವು ನಾರಾಯಣ ಭಟ್ ಇದ್ದಾರೆ. ಇವರು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ವಿಟ್ಲ ಸಮೀಪದ ಬಿಲ್ಲಂಪದವಿ ನಿವಾಸಿ. ಕೃಷಿ ವೃತ್ತಿಗೆ ಹೊಂದಿಕೊಂಡವರು.

ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕೃಷಿಕರು ಮನೆ ಖರ್ಚಿಗಾಗಿಯೇ ವಿವಿಧ ತರಕಾರಿಗಳನ್ನು ಬೆಳೆಯುತ್ತಾರೆ. ತುಸು ಹೆಚ್ಚಿದ್ದರೆ ಸ್ನೇಹಿತರಿಗೆ, ಬಂಧು–ಬಳಗದವರ ಜೊತೆ ಹಂಚಿಕೊಂಡು ಸವಿಯುತ್ತಾರೆ. ಇನ್ನು ಕೆಲವರು ತಾಜಾ ತರಕಾರಿಗಳನ್ನೇ ಮಾರಾಟ ಮಾಡಿ ಆದಾಯ ಗಳಿಸುತ್ತಾರೆ. ಆದರೆ ಬೀಜಕ್ಕಾಗಿ ತರಕಾರಿ ಬೆಳೆಯುವುದು ವಿಶೇಷವೇ.

## ತರಕಾರಿ ಬೆಳೆಯತ್ತ ಆಸಕ್ತಿ

ಅಡಿಕೆ, ಬಾಳೆ, ತೆಂಗು ಕೃಷಿಯನ್ನು ಮಾಡುತ್ತಿರುವ ನಾರಾಯಣ ಭಟ್, 1998 ರಲ್ಲಿ ಅಡಿಕೆ ದರ ಕುಸಿದ ಪರಿಣಾಮ ಕಷ್ಟ ಎದುರಿಸುವಂತಾಯಿತು. ಆ ಸಂಕಟದಿಂದ ಪಾರಾಗಲು ಪರ್ಯಾಯ ಬೆಳೆಯತ್ತ ಅವರು ಚಿಂತಿಸಿದರು. ಸುಲಭದಲ್ಲಿ ಬೆಳೆಯನ್ನು ಬೆಳೆಯಬೇಕು; ಜೀವನದ ನೌಕೆಯನ್ನು ಸಾಗಿಸಲು ಅನುಕೂಲ ಆಗಬೇಕೆಂಬ ಉದ್ದೇಶದಿಂದ ತರಕಾರಿ ಬೆಳೆ ಬೆಳೆಯುವುದೇ ಉತ್ತಮವೆಂದು ನಿರ್ಧರಿಸಿದರು. ತರಕಾರಿ ಬೆಳೆದರೆ ಕೇವಲ ಮೂರ್ನಾಲ್ಕು ತಿಂಗಳಲ್ಲಿಯೇ ಹಣ ಸಂಪಾದಿಸಬಹುದು ಎಂಬ ಲೆಕ್ಕಾಚಾರ ಹಾಕಿಯೇ ತರಕಾರಿ ಬೆಳೆಯಲು ಆಸಕ್ತಿ ವಹಿಸಿದರು.

ಇವರು ಮಳೆಗಾಲದ ಸಮಯದಲ್ಲಿ ಮನೆಯಂಗಳಗಳಲ್ಲಿಯೇ ತರಕಾರಿ ಬೆಳೆಯುತ್ತಾರೆ. ನೆಲದಲ್ಲಿ ಓಳಿ ಮಾಡಿ ಬೀಜವನ್ನು ಹಾಕುತ್ತಾರೆ. ಜತೆಗೆ, ಪ್ಲಾಸ್ಟಿಕ್ ಚೀಲ, ಗೋಣಿ ಚೀಲಕ್ಕೆ ಸುಡು ಮಣ್ಣು, ಅಡಿಕೆ ಸಿಪ್ಪೆ, ಹಟ್ಟಿ ಗೊಬ್ಬರವನ್ನು ಮಿಶ್ರಣ ಮಾಡಿ ತುಂಬುತ್ತಾರೆ. ಆಮೇಲೆ ತರಕಾರಿ ಗಿಡ ನೆಟ್ಟು ಪೋಷಿಸುತ್ತಾರೆ. ಸೆಗಣಿ ನೀರು, ಸ್ಲರಿ, ಜೀವಾಮೃತ (ಪ್ರತೀ ವಾರ) ವನ್ನು ಆ ಗಿಡಗಳಿಗೆ ನೀಡಿ ಸಂರಕ್ಷಿಸುತ್ತಾರೆ. '